**ಅಸಲು ದಾವ ಸಂಖ್ಯೆ: 1135/2017**

**ಪಿ.ಡಬ್ಲೂ - 2**

**ದಿಃ 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. RCI ರವರಿಂದಃ-**

1. ನನಗೆ ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ನೋಟಿಸ ಬಂದಿರುತ್ತದೆ. ವಾದಿಯು ನನಗೆ ಈ ದಾವೆಯಲ್ಲಿ ಸಾಕ್ಷ್ಯ ನುಡಿಯಬೇಕೆಂದು ಹೇಳಿರುತ್ತಾರೆ. ನನ್ನ ಹಾಗೂ ವಾದಿಯ ನಡುವೆ ಮೊದಲಿನಿಂದ ಒಳ್ಳೆಯ ಗೆಳೆತನ ಇರುತ್ತದೆ ಎಂದರೆ ಸರಿ. ವಾದಿಯು ಈ ದಾವೆಯಲ್ಲಿ ಎಷ್ಟು ಜನರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಹಾಗೂ ವಾದಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿ ಹಾಜರುಪಡಿಸಿರುವ ಖರೀದಿ ಪತ್ರ, ಉತಾರ ಹಾಗೂ ತೆರಿಗೆ ಪಾವತಿ ರಶೀದಿಯನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತನ್ನು 2018 ನೇ ಇಸವಿಗೂ ಮೊದಲೇ ವಾದಿ ಓರ್ವ ಕುಲಕರ್ಣಿ ರವರಿಂದ ಖರೀದಿಸಿದ್ದರು. ಸದರಿ ಖರೀದಿ ಪತ್ರ ನೋಂದಾವಣೆ ಆಗಿರುತ್ತದೆ. ಸದರಿ ಖರೀದಿ ಪತ್ರದ ಮೇಲೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ದಾವಾ ಸ್ವತ್ತನ್ನು ಎಷ್ಟು ಮೊತ್ತಕ್ಕೆ ವಾದಿ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಖರೀದಿಯ ಮಾತುಕತೆ ಆಗುವ ಸಮಯದಲ್ಲಿ ನಾನು ಹಾಜರಿರಲಿಲ್ಲ.

2. ನಾನು ಪಿಯುಸಿ ವರೆಗೆ ಮರಾಠಿ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನಗೆ ಸೇರಿದ ಆಸ್ತಿಯು ದಾವಾ ಸ್ವತ್ತಿನ ಪಕ್ಕದಲ್ಲಿಯೇ ಇರುತ್ತದೆ. ದಾವಾ ಸ್ವತ್ತಿನ ಚೆಕ್ಕುಬಂದಿ ಹೇಳಬಲ್ಲೆ, ಅದರ ಪೂರ್ವಕ್ಕೆ ವಿನೋದ ಲಕ್ಕು ರವರ ಆಸ್ತಿ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ವಾದಿಯ ಆಸ್ತಿ

ಇರುತ್ತದೆ. ವಾದಿಗೆ ಸೇರಿದ ಆಸ್ತಿಯ ಸಂಖ್ಯೆ ಎಂದರೆ ಸಾಕ್ಷಿ ನನಗೆ ಸರ್ವೆ ನಂಬರ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ, ಹಾಗೂ ಸದರಿ ಸರ್ವೆ ನಂಬರ 191ಪಿ ಆಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯು ಸುಮಾರು 10 ರಿಂದ 15 ವರ್ಷಗಳಿಂದ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುತ್ತಾರೆ. ನನಗೆ ಈ ದಾವೆಯ ಕುರಿತು ವಿವರವಾದ ಮಾಹಿತಿ ಇರುವುದಿಲ್ಲ, ಕೇವಲ ವಾದಿ ಹೇಳಿದ ಮೇರೆಗೆ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**